ಹೋಗಿರಬಹುದೇ? ಹಾಗಿದ್ದಿದ್ದರೆ ಒಂದು ಮೆಸೇಜ್ ಆದರೂ ಹಾಕಿರುತಿದ್ದ. ಚಾರ್ಜ್ ಇದೆಯೋ ಇಲ್ಲವೋ? ರಿಂಗ್ ಆಗುತ್ತಿದೆಯಲ್ಲ, ಹಾಗಾದರೆ ಚಾರ್ಜ್ ಇದೆ. ಮೊಬೈಲ್ ಎಲ್ಲಾದರೂ ಕಳೆದುಕೊಂಡಿರಬಹುದೆ? ಒಂದು ಸರ್ತಿ ಸ್ಟೇಷನಿಗೆ ಹೋಗಿ ನೋಡುವುದು ಸರಿ ಅನ್ನಿಸಿ ಬ್ಯಾಗ್ ತೆಗೆದುಕೊಂಡು ಸ್ಟೇಷನ್ ಬಳಿ ಬಂದಳು. ಒಳಗೆ ಹೋದರೆ ಜನ ಜಂಗುಳಿ. ಟ್ರೈನ್ ಹೆಸರೇನು ಹೇಳಿದ್ದ ಎಂದು ನೆನಪಿಸಿಕೊಂಡಳು. ಕಾಚಿಗುಡ ಎಕ್ಸ್‌ಪ್ರೆಸ್ ಎಂದಿದ್ದು ಜ್ಞಾಪಕಕ್ಕೆ ಬಂತು. ಟಿಕೆಟ್ ಕೂಡ ಕೊಡಲಿಲ್ಲ ಎಂಬುದು ಹೊಳೆಯಿತು. ನನಗೆ ಟಿಕೆಟ್ ಯಾಕೆ ಕೊಡಲಿಲ್ಲ? ನಾನ್ಯಾಕೆ ಕೇಳಲಿಲ್ಲ? ಛೆ, ಮೋಸ ಹೋದೆನೇ? ಬಿಟ್ಟು ಹೋದರೆ ಎಂದು ಯೋಚಿಸುತ್ತ ಮಾತ್ತೆರಡು ಸಾರಿ ಫೋನ್ ಮಾಡಿದಳು. ಉತ್ತರ ಬರಲಿಲ್ಲ. ಕೌಂಟರ್ ಬಳಿ ಹೋಗಿ, 'ಕಾಚಿಗುಡ ಎಕ್ಸ್‌ಪ್ರೆಸ್ ಎಷ್ಟನೇ ಪ್ಲಾಟ್‌ಫಾರ್ಮ್' ಎಂದು ಕೇಳಿದಳು. ಅದಕ್ಕವನು ವಿಚಿತ್ರವಾಗಿ ನಕ್ಕು, 'ಅದು ಆರೂವರೆಗೆ ಹೋಯಿತಲ್ಲ' ಎಂದ.

ಇನ್ನೂ ಒಂದೆರಡು ಬಾರಿ ಫೋನ್ ಮಾಡಿದಳು. ಉತ್ತರ ಸಿಗಲಿಲ್ಲ. ಮೆಲ್ಲಗೆ ಎದ್ದು ಆಚೆಯ ಬೆಂಚಿನಲ್ಲಿ ಕೂತಳು. ಎದುರಿಗೆ ತನ್ನ ನೆಚ್ಚಿನ ನಾಯಕಿಯ ಅದೇ ಚಿತ್ರ. ಅದೇ ಸಮಯಕ್ಕೆ ಬಾಲ ಮತ್ತು ಮಂಜನ ಮೆಸೇಜ್‌ಗಳು ಬಂದಿದ್ದವು.

ಮಂಜನಿಂದ ಬಂದ ಎಸ್‌ಎಂಎಸ್‌ನಲ್ಲಿ 'ಸಾರಿ' ಎನ್ನುವ ಪದವೊಂದನ್ನು ಬಿಟ್ಟು ಬೇರೇನೂ ಇರಲಿಲ್ಲ. ಮರು ನಿಮಿಷದಲ್ಲಿ ಮತ್ತೊಂದು ಮೆಸೇಜ್ ಈ ಬಾರಿ ಬಾಲನದ್ದು, 'ಸಾರಿ ಚಂಪಾ, ನನ್ನನ್ನ ಕ್ಷಮಿಸಿಬಿಡು, ನಿನ್ನನ್ನ ಬಿಟ್ಟುಹೋಗಬೇಕು ಅಂತ ಯೋಚಿಸಿರಲಿಲ್ಲ, ಆದರೆ ನಿನಗೆ ಹದಿನೆಂಟು ತುಂಬಿಲ್ಲ, ನೀನಿನ್ನೂ ಮೈನರ್. ಸಿಕ್ಕಿ ಹಾಕಿಕೊಂಡರೆ ಕಿಡ್ನಾಪ್ ಕೇಸ್ ಹಾಕಿ ಜೈಲಿಗೆ ಹಾಕ್ತಾರೆ ಅನ್ನೋ ಸೂಕ್ಷ್ಮ ನನಗೆ ಹೊಳೆದಿರಲಿಲ್ಲ ನಿನ್ನೆಯತನಕ. ನಿನ್ನನ್ನ ಕರೆದುಕೊಂಡು ಹೋಗಲ್ಲ ಅಂದ್ರೆ ನೀನು ರಂಪ ಮಾಡ್ತಿಯಾ ಅನ್ನೋ ಭಯ. ಅದಕ್ಕೆ ನಿನ್ನನ್ನ ಬಿಟ್ಟು ಹೋಗ್ತಾ ಇದ್ದೀನಿ. ತಪ್ಪು ತಿಳಿಬೇಡ, ಇನ್ನು ಎರಡು ವರ್ಷಕ್ಕೆ ನೀನು ಮೇಜರ್ ಆಗ್ತೀಯಾ, ಆಗ ಹೈದರಾಬಾದ್‌ಗೆ ಕರೆಸಿಕೊಳ್ಳುತ್ತೀನಿ, ಕ್ಷಮಿಸು ಪ್ಲೀಸ್' ಎಂದಿತ್ತು.

ಕಣ್ಣು ಕತ್ತಲಾಗಿ ಬೀಳುವ ಹಾಗಾಯಿತು. ಮೆಲ್ಲಗೆ ಕಣ್ಣು ಮುಚ್ಚಿದಳು. ಬೆಂಚಿಗೆ ಒರಗಿಕೊಂಡಳು. ಕಣ್ಣು ಬಿಟ್ಟರೆ ಎದುರಿಗೆ ಘೋರ ರಾಕ್ಷಸ ನಿಂತು ನಗುತ್ತಿದ್ದ. ಕೂಗಿದಳು, 'ಯಾರೋ ನೀನು, ದುಶ್ಯಾಸನನೂ? ಅಲ್ಲ, ಅವನೆದೆ ಬಗೆದು ಭೀಮ ಕೊಂದನಲ್ಲವೇ. ಕೀಚಕನೋ, ಅವನನ್ನ ಭೀಮ ಒದ್ದು ಮುದ್ದೆ ಮಾಡಿದನಲ್ಲ. ದುರ್ಯೋಧನನೊ, ಅವನ ತೊಡೆಯನ್ನು ಭೀಮ ಮುರಿದನಲ್ಲ... ಮತ್ತೆ ಯಾರು ಯಾರಿವನು? ಯಾರು ಹೋ ತಿಮಿರಾಸುರನೋ ಬಂದೆಯಾ ಬಾ ಬಾ' ಧಡಕ್ಕನೆ ಎಚ್ಚರವಾಯಿತು. ಮೈಯೆಲ್ಲಾ ಬೆವರಿ ಒದ್ದೆಯಾಗಿತ್ತು. ಮತ್ತೆ ಫೋನ್ ಮಾಡಬೇಕೆನಿಸಿತು. ಆದರೆ, ಮಾಡಲಿಲ್ಲ. ಮೊಬೈಲ್‌ನಲ್ಲಿ ಸಮಯ ನೋಡಿದಳು. ಏನೋ ಹೊಳೆದಂತಾಯಿತು. ಮುಂದಿಟ್ಟ ಹೆಜ್ಜೆ ಹಿಂದಿಡಬಾರದು ಎಂದೆನಿಸಿತು. ಹಿಂದಕ್ಕೆ ಟಿಕೆಟ್ ಕೌಂಟರ್ ಕಂಡಿತು. ಸೀದಾ ಅತ್ತ ನಡೆದಳು. ಮನಸ್ಸು ನಿರ್ಭಯವಾಗಿತ್ತು. ಹೆಜ್ಜೆ ದೃಢವಾಗಿ ಇಡುತ್ತ ಬಂದು, 'ಹೈದರಾಬಾದ್‌ಗೆ ಹೋಗುವ ಟ್ರೈನ್‌ಗೆ ಒಂದು ಟಿಕೆಟ್ ಕೊಡಿ' ಎಂದಳು.

**ಆದರ್ಶ್ ವಿಜಯಲಕ್ಷ್ಮಿ**

ಬೆಂಗಳೂರಿನಲ್ಲಿ ವಾಸ ಮತ್ತು ಬಹುರಾಷ್ಟ್ರೀಯ ಕಂಪನಿ ಐಬಿಎಂನಲ್ಲಿ ಉದ್ಯೋಗ. ಹವ್ಯಾಸಿ ಬರಹಗಾರ. ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ.